ರಾಜಕುಮಾರ ಕುಲಕರ್ಣಿ ಕಲಬುರಗಿ ತಾಲ್ಲೂಕಿನ ಕುಮಸಿ ಗ್ರಾಮದವರು. ಗುಲ್ಬರ್ಗಾ ವಿಶ್ವವಿದ್ಯಾಲಯದಿಂದ ಗ್ರಂಥಾಲಯ ವಿಜ್ಞಾನದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಪ್ರಸ್ತುತ ಬಾಗಲಕೋಟೆಯ ಬಿ.ವಿ.ವಿ.ಸಂಘದ ಎಸ್. ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಮುಖ್ಯಗ್ರಂಥಪಾಲಕರಾಗಿದ್ದಾರೆ. 'ಬೇರಿಗಂಟಿದ ಮರ' ಮತ್ತು 'ದೊಕಾಚಿ ಮೇಷ್ಟ್ರ ಶಾಂತಿ ಕ್ರಾಂತಿ' ಕಥಾಸಂಕಲನಗಳು ಪ್ರಕಟವಾಗಿವೆ.

ವಾಡ್ಯಾದಿಂದ ಕಲ್ಲಹಂಗರಗಾ ಶಾಲೆಗೆ ಹೋಗುವ ವಿದ್ಯಾರ್ಥಿಗಳ ಇಡೀ ಪಟಾಲಂ ಪ್ರತಿದಿನ ದಿಲ್‌ಖುಷ್ ಪಾನ್‌ಶಾಪ್ ಎದುರಿನಿಂದಲೇ ಹಾಯ್ದು ಹೋಗುತ್ತಿತ್ತು. ಮನೆದೇವರಾದ ಯಲ್ಲಾಲಿಂಗನೇ ಬಂದು ವರ ಕೊಟ್ಟನೇನೋ ಎನ್ನುವಂತೆ ಚಂದ್ರುಗೆ ದಿನದ ಎರಡು ಹೊತ್ತು ವೈಜಯಂತಿಯ ದರ್ಶನಭಾಗ್ಯ ಕೇಳದೆ ಪ್ರಾಪ್ತವಾಗಿತ್ತು. ವಿದ್ಯಾರ್ಥಿಗಳು ಪಾನ್‌ಶಾಪ್ ಎದುರಿನಿಂದ ಹಾದುಹೋಗುವಾಗ ಅಂಗಡಿಯ ಎಡಬಲದಲ್ಲಿ ಪ್ರತಿಷ್ಠಾಪನೆಗೊಂಡಿದ್ದ ಸ್ಪೀಕರ್‌ಗಳು ಜೋರು ಧ್ವನಿಯಲ್ಲಿ ಪ್ರೀತಿ ಪ್ರಣಯದ ಯುಗಳ ಗೀತೆಗಳನ್ನು ಹಾಡಿ ಅವರ ಗಮನ ಸೆಳೆಯುತ್ತಿದ್ದವು. ವೈಜಯಂತಿ ಆಗಾಗ ತನ್ನ ದೃಷ್ಟಿಯನ್ನು ದೊಡ್ಡಗಾತ್ರದ ಸ್ಪೀಕರ್‌ಗಳತ್ತ ಮತ್ತು ಕುಡಿನೋಟವನ್ನು ಅವೆರಡರ ಮಧ್ಯದಲ್ಲಿ ಐರಾವತದಲ್ಲಿ ಕುಳಿತ ಇಂದ್ರನಂತೆ ಕಾಣುವ ಚಂದ್ರನತ್ತ ಹರಿಸುತ್ತಿದ್ದಳು. ಆ ಒಂದು ದಿವ್ಯನೋಟಕ್ಕೆ ನೂರಾರು ವರ್ಷಗಳಿಂದ ಕಾದುಕುಳಿತವನಂತೆ ಚಂದ್ರು ಧನ್ಯತೆಯ ಉತ್ತುಂಗಕ್ಕೇರಿ ಮುಖದಲ್ಲಿ ಮುಗುಳ್ನಗೆ ಸೂಸುತ್ತ ಕಣ್ಣುಗಳಲ್ಲಿ ಅಪಾರ ಪ್ರೀತಿ ತುಳುಕಿಸುತ್ತಿದ್ದ.

ಹಲವು ದಿನಗಳ ಕಾಲ ನಡೆದ ಈ ದೃಷ್ಟಿಯುದ್ಧ ಕೊನೆಗೊಂದು ದಿನ ವೈಜಯಂತಿ ಮುಗುಳ್ನಕ್ಕು ಎಡಗಣ್ಣು ಮಿಟುಕಿಸುವುದರಲ್ಲಿ ಪರ್ಯವಸಾನಗೊಂಡಿತು. ಹುಡುಗಿಯ ಧೈರ್ಯಕ್ಕೆ ಚಂದ್ರು ದಂಗಾದ. ತನ್ನ ಪ್ರೀತಿಯನ್ನು ಅಪೂರ್ವವಾಗಿ ವ್ಯಕ್ತಪಡಿಸಬೇಕೆಂದು ಹಂಬಲಿಸುತ್ತಿದ್ದವನಿಗೆ ಆಗಷ್ಟೇ ಬಿಡುಗಡೆಯಾಗಿದ್ದ 'ಒಲವಿನ ಉಡುಗೊರೆ' ಸಿನಿಮಾ ಸ್ಫೂರ್ತಿ ನೀಡಿತು. ಅದೊಂದು ಮಧ್ಯಾಹ್ನ ಗಿರಾಕಿಗಳಿಲ್ಲದ ಸಮಯ ತನ್ನ ಎಡಮುಂಗೈ ಕೊಯ್ದುಕೊಂಡು ರಕ್ತದಲ್ಲಿ ಪ್ರೇಮಪತ್ರ ಬರೆದು ಸಾಯಂಕಾಲ ಶಾಲೆಯಿಂದ ಹಿಂದಿರುಗುತ್ತಿದ್ದ ವೈಜಯಂತಿಯನ್ನು ದಾರಿಯಲ್ಲಿ ಅಡ್ಡಗಟ್ಟಿ ಪತ್ರಕೊಟ್ಟು ತನ್ನ ಮನದ ಬಯಕೆಯನ್ನು ನಿವೇದಿಸಿಕೊಂಡ. ವೈಜಯಂತಿ ಜೊತೆಗಿದ್ದ ಗೆಳತಿಯರು ಕಿಸಕ್ಕೆಂದು ನಕ್ಕಿದ್ದು ದಶ ದಿಕ್ಕುಗಳಿಂದ ಮಾರ್ದನಿಸಿದಂತಾಯಿತು. ಹಿಂದೆ ಬರುತ್ತಿದ್ದ ಪಡ್ಡೆ ಹೈದರು ಹೋ ಎಂದು ಕಿರುಚಿದರು. ವಿಷಯ ಕ್ಷಣಮಾತ್ರದಲ್ಲಿ ಕಿವಿಯಿಂದ ಕಿವಿಗೆ ತಲುಪಿ ಊರು ಪ್ರಕ್ಷುಬ್ಧಗೊಂಡಿತು. ವಿಷಯ ತಿಳಿದು ಶಾಂತವೀರಪ್ಪಗೌಡರು ಮಗಳನ್ನು ಶಾಲೆ ಬಿಡಿಸಿ ಮನೆಯಲ್ಲಿ ಕೂಡಿಹಾಕಿದರು. ಮಗನ ಅವಿವೇಕದ ವರ್ತನೆಯಿಂದ ಗೌಡರನ್ನು ಎದುರು ಹಾಕಿಕೊಳ್ಳುವ ಸಂದರ್ಭ ಬಂತೆಂದು ಕುಬೇರಲಿಂಗ ಆತಂಕಗೊಂಡ.

* * *

ದಿಲ್‌ಖುಷ್ ಪಾನ್‌ಶಾಪ್ ಪ್ರೊಪ್ರಾಯಿಟರ್ ಚಂದ್ರುನ ಪ್ರೇಮಪ್ರಕರಣದ ವಾಸನೆ ಮೂಗಿಗೆ ಬಡಿದು ಅದನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಬೇಕೆಂದು ಯೋಚಿಸಿದವರಲ್ಲಿ ಮೊದಲಿಗನೆಂದರೆ ತನ್ನ ಗೆಳೆಯರ ಬಳಗದಲ್ಲಿ ಅರೆಬರೆ ಬರಹಗಾರನೆಂದು ಖ್ಯಾತನಾದ ಪರಮಾನಂದನೆಂಬ ಸೋಕಾಲ್ಡ್ ಸಾಹಿತಿ. ತಾನೊಬ್ಬ ದೊಡ್ಡ ಲೇಖಕನಾಗಬೇಕೆಂದು ಕೈಗೆ ಸಿಕ್ಕಿದ್ದನ್ನೆಲ್ಲ ಓದುತ್ತಿದ್ದ ಪರಮಾನಂದನ ಆಸೆ ಇನ್ನೂ ಫಲಿಸಿರಲಿಲ್ಲ. ಪ್ರಸಿದ್ಧ ಪತ್ರಿಕೆಗಳಿಗೆ ಕಳುಹಿಸುತ್ತಿದ್ದ ಕಥೆ, ಲೇಖನಗಳು ಹೋದಷ್ಟೇ ವೇಗದಲ್ಲಿ ಪ್ರಕಟಣೆಗೆ ಅರ್ಹವಾಗಿಲ್ಲ ಎಂಬ ಹಣೆಪಟ್ಟಿ ಹೊತ್ತು ಮರಳಿ ಕೈಸೇರುತ್ತಿದ್ದರೂ ಅವನು ತನ್ನ ಪ್ರಯತ್ನ ಕೈಬಿಟ್ಟಿರಲಿಲ್ಲ. ತನ್ನ ಕಥೆ, ಲೇಖನಗಳನ್ನು ಪ್ರಕಟಿಸದೆ ಹಿಂತಿರುಗಿಸುತ್ತಿದ್ದ ಸಂಪಾದಕರಿಗೆ ಪಾಠ ಕಲಿಸಲೆಂದೋ ಇಲ್ಲ ತಾನೊಬ್ಬ ದೊಡ್ಡ ಲೇಖಕನೆಂದು ಸಾಬೀತುಪಡಿಸಲೆಂದೋ ಸೂಕ್ತ ಸಂದರ್ಭಕ್ಕಾಗಿ ಕಾಯುತ್ತಿದ್ದವನಿಗೆ ಚಂದ್ರುನ ಪ್ರೇಮಪ್ರಕರಣ ಸುವರ್ಣ ಅವಕಾಶವನ್ನೇ ಒದಗಿಸಿತು. ನೈಜ ಘಟನೆಗೆ ಕಲ್ಪನೆಯ ರೆಕ್ಕೆಪುಕ್ಕ ಕಟ್ಟಿ ಲೇಖನ ಬರೆದು 'ಸುಂಟರಗಾಳಿ' ಪತ್ರಿಕೆಯ ಬೆಂಕಿ ಸಂಗಣ್ಣನಿಗೆ ಪ್ರಕಟಿಸುವಂತೆ ದುಂಬಾಲುಬಿದ್ದ. ಪತ್ರಿಕೆಯ ಸರ್ಕ್ಯುಲೇಷನ್